**ಅಸಲು ದಾವಾ ನಂಃ127/2021**
**ಡಿ.ಡಬ್ಲ್ಯೂಃ 01**

**ದಿನಾಂಕಃ 14-03-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು: ಶ್ರೀ ಟಿ ಟಿ ವಾದಿ ಪರ ವಕೀಲರಿಂದ

ನನ್ನ ಮಾವ ತಿಪ್ಪಜ್ಜ. ತಿಪ್ಪಜ್ಜನಿಗೆ ಮೂರು ಜನ ಮಕ್ಕಳು. ಸದರಿ ತಿಪ್ಪಜ್ಜನಿಗೆ ಸಾಕಮ್ಮ, ಕರಿಯಮ್ಮ ಮತ್ತು ಮಚ್ಚಕ್ಕ ಎನ್ನುವ ಮೂರು ಜನ ಹೆಣ್ಣು ಮಕ್ಕಳು ಜನಿಸಿರುತ್ತಾರೆ ಮತ್ತು ಯಾವುದೇ ಗಂಡು ಸಂತಾನ ಜನಿಸಿರುವುದಿಲ್ಲ. ತಿಪ್ಪಜ್ಜನಿಗೆ ಸೇರಿದ ಸರ್ವೇ ನಂ.137 ರ 3 ಎಕರೆ ಜಮೀನು ಇದೆ. ಸರ್ವೇ ನಂ.37 ರ ಮುಕ್ಕಾಲು ಎಕರೆ ಜಮೀನು ಇದೆ. ಒಂದು ಮನೆ ಇರುತ್ತದೆ. ಸರ್ವೇ ನಂ.64 ರ 3 ಎಕರೆ ಜಮೀನು ಇದೆ. 3 ಎಕರೆ ಸರಕಾರಿ ಜಮೀನು ಇದೆ. ತಿಪ್ಪಜ್ಜನ ಮಕ್ಕಳು ಸ್ವತ್ತನ್ನು ಸಮನಾಗಿ ಭಾಗ ಮಾಡಿಕೊಂಡು ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿ.

ಸಾಕಮ್ಮ ವಾದಿ ಗುರುಮೂರ್ತಿಯವರ ತಾಯಿ ಎಂದರೆ ಸರಿ. ತಿಪ್ಪಜ್ಜನ ಇಬ್ಬರು ಹೆಣ್ಣು ಮಕ್ಕಳಾದ ಕರಿಯಮ್ಮ ಮತ್ತು ಮಚ್ಚಕ್ಕರವರನ್ನು ನಾನು ವಿವಾಹವಾಗಿರುತ್ತೇನೆ ಎಂದರೆ ಸರಿ. ಕರಿಯಮ್ಮ ಮತ್ತು ಮಚ್ಚಕ್ಕ ಇಬ್ಬರು ಪೌತಿಯಾಗಿರುತ್ತಾರೆ. ಕರಿಯಮ್ಮನಿಗೆ ಯಾವುದೇ ಸಂತಾನ ಆಗಿರುವುದಿಲ್ಲ. ಸರ್ವೇ ನಂ.137 ರ ಜಮೀನನ್ನು ವಾದಿ ಮತ್ತು ನಾನು ಭಾಗ ಮಾಡಿಕೊಂಡು ಸ್ವಾಧೀನವನ್ನು ಹೊಂದಿರುತ್ತೇವೆ ಎಂದರೆ ಸುಳ್ಳು. ವಾದಿಯು ಸದರಿ ಜಮೀನಿನಲ್ಲಿ ಶೇಂಗಾ ಬೆಳೆಯನ್ನು ಬೆಳೆಯುತ್ತಿದ್ದಾರೆ ಎಂದರೆ ಸುಳ್ಳು. ಖಾತಾ ನಂ.368 ರಲ್ಲಿರುವ ಮಾಳಿಗೆ ಮನೆ ವಾದಿಯ ಸ್ವಾಧೀನದಲ್ಲಿದೆ ಎಂದರೆ ಸರಿ. 3 ಎಕರೆ ಸರಕಾರಿ ಜಮೀನಿನಲ್ಲಿ ಯಾರು ಉಳುವೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸದರಿ ಕೋರಿಕೆಯನ್ನು ಅನುಮತಿಸಲಾಯಿತು ಮತ್ತು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.